**ಸಾಕ್ಷಿಗೆ ದಿನಾಂಕ:29-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. ಇಪಿಪಿ ಜವಕೀಲರಿಂದ ::**

ನನ್ನ ಅಜ್ಜ ಸಿದ್ದರಾಮಪ್ಪ ರವರಿಗೆ 3 ಗಂಡು ಮತ್ತು 2 ಹೆಣ್ಣು ಮಕ್ಕಳು ಇದ್ದರು. ನನ್ನ ತಂದೆ ಅವರ ಹಿರಿಯ ಮಗ ಆಗಿರುತ್ತಾರೆ ಎಂದರೆ ಸರಿ. ಮಹೇಶ್ವರಪ್ಪ ಹಾಗೂ ಚಂದ್ರಪ್ಪ ರವರು ನನ್ನ ತಂದೆಯ ಸಹೋದರರಾಗಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗಳನ್ನು ನನ್ನ ತಂದೆ ಹಾಗೂ ಅವರ ಇಬ್ಬರ ಸಹೋದರರು ಜುಬಾನೇ ಹಿಸ್ಸೆ ಅಡಿಯಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗವು 1995 ರಲ್ಲಿ ಆಗಿರಬಹುದು, ನಿಖರವಾಗಿ ದಿನಾಂಕ ನೆನಪಿಲ್ಲ. ಸದರಿ ವಿಭಾಗದ ಅನ್ವಯ ಖಾತಾ ಬದಲಾವಣೆ ಮಾಡಿಕೊಂಡು ಮೂರು ಜನ ಸಹೋದರರು ಅವರ ಹಿಸ್ಸೆಯ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ನನ್ನ ತಂದೆ ಶಿವಮೂರ್ತಪ್ಪ ರವರಿಗೆ ನಾನು ಒಬ್ಬಳೇ ಮಗಳಾಗಿರುತ್ತೇನೆ. ನಾನು ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದೇನೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಯಾವುದೇ ತೋಟ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ಮದುವೆ ಖರ್ಚಿಗೆ ನನ್ನ ತಂದೆ ಸಾಲ ಮಾಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸೌತ್ನಹಳ್ಳಿ ಸಿದ್ದರಾಮಪ್ಪ ರವರಿ ಬಳಿ ಆ ರೀತಿ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಸಾಲವನ್ನು ತಿರುವಳಿ ಮಾಡಲು ನಮ್ಮ ಜಮೀನು ಅನ್ನು ನನ್ನ ತಂದೆ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾರಾಟದ ಕ್ರಯಪತ್ರಕ್ಕೆ ನನ್ನ ತಂದೆ ತಾಯಿಗಳು ಇಬ್ಬರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ನಾನು ಗರ್ಬಿಣಿಯಾಗಿದ್ದ ಕಾರಣ ನನಗೆ ವಿಚಾರವನ್ನು ತಿಳಿಸಿ ಆ ರೀತಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಪೂರ್ವದಲ್ಲಿ ನನ್ನ ತಂದೆ ಇತರೇ ಜಮೀನು ಅನ್ನು ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮದುವೆ ಸಾಲದ ತಿರುವಳಿಗೆ ದಾವಾ ಶೆಡ್ಯೂಲ್ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸತ್ಯಾಂಶಗಳು ನನಗೆ

ತಿಳಿದಿದ್ದರೂ ಸಹ ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ಸುಳ್ಳು ಕತೆ ಕಟ್ಟಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಮೋಸ ಮಾಡುವ ದುರುದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: